**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಅಪರ ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,</u>**

**<u>ಸಿ.ಸಿ. ಸಂಖ್ಯೆಃ 3472/2023</u>**

**ಸಿ.ಡಬ್ಲ್ಯೂ: 10 /ಪಿ.ಡಬ್ಲ್ಯೂಃ 6**

**ಪ್ರಮಾಣೀಕರಿಸಿದ ದಿನಾಂಕಃ 9.10.2024**

| | |
|---|---|
| **ಹೆಸರು** | ಮಂಜುನಾಥ. ಬಿ |
| **ತಂದೆಯ ಹೆಸರು** | ಬಸಪ್ಪ |
| **ವಯಸ್ಸು** | 33 ವರ್ಷ |
| **ವೃತ್ತಿ** | ಪಿ ಎಸ್ ಐ, ಅಂಡರ್ ಸನ್ ಪೇಟೆ |
| **ಸ್ಥಳ** | ಕೆ ಜಿ ಎಫ್ |

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದಃ-</u>**

ನಾನು ದಿಃ 14.7.2023 ರಿಂದ ಇಲ್ಲಿಯವರೆಗೆ ಅಂಡರ್ ಸನ್ ಪೇಟೆ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ15.11.2023 ರಂದು ಹಾಲಿ ಪ್ರಕರಣವನ್ನು ಕಡತವನ್ನು ಚಾಸಾ9 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ. ಅದೇ ದಿನ ಚಾಸಾ1 ರವರಿಗೆ ಚಾಸಾ2 ಮತ್ತು 3 ರವರು ಪ್ಲೇಸ್ ಅಫ್ ಸೇಫ್ಟಿ ಹೋಮ್‌ನಲ್ಲಿ ಕೆಲಸ ಮಾಡುತ್ತಿರುವ ಬಗ್ಗೆ ದಾಖಲೆ ಕೊಡುವಂತೆ ಮನವಿ ಮಾಡಿರುತ್ತೇನೆ. ನಂತರ ಚಾಸಾ1 ರವರು ಚಾಸಾ2 ಮತ್ತು 3 ರವರು ಕೆಲಸ ಮಾಡುತ್ತಿರುವ ಬಗ್ಗೆ ದಾಖಲಾತಿಯನ್ನು ಕೊಟ್ಟಿರುತ್ತಾರೆ. ಸದರಿ ದಾಖಲಾತಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ3 ರವರು ಪ್ಲೇಸ್ ಅಫ್ ಸೇಫ್ಟಿ ಹೋಮ್‌ನ ಬಾಗಿಲನ್ನು ಹೊಡೆದು ಹಾಕಿರುವ ಬಗ್ಗೆ ಭಾವಚಿತ್ರಗಳು ಮತ್ತು ಭಾ ಸಾ ಅ ನಿಯಮ 65 ಬಿ ರ ಪ್ರಮಾಣಪತ್ರವನ್ನು ಸಹ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 15.11.2023 ರಂದು ಹಾಲಿ ಪ್ರಕರಣದ ತನಿಖೆಯನ್ನು ಪೂರೈಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

3. ಸಾಕ್ಷಿಯು ಚಾಸಾ1 ರವರಿಗೆ ಬರೆದ ಮನವಿ ಪತ್ರ, 3 ಭಾವಚಿತ್ರಗಳು ಮತ್ತು ಭಾ ಸಾ ಅ ನಿಯಮ 65 ಬಿ ರ ಪ್ರಮಾಣಪತ್ರದ ದಾಖಲೆಗಳನ್ನು ಜೊತೆಗೆ ಸಹಿಗಳನ್ನು ನೋಡಿ ಗುರ್ತಿಸುತ್ತಾರೆ. ಸದರಿ ದಾಖಲೆಗಳನ್ನು ನಿಪಿ16 ರಿಂದ ನಿಪಿ20 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ16 ಎ ಯಿಂದ ನಿಪಿ20 ಎ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ ಕೆ ಸಿ ಎನ್ ವಕೀಲರಿಂದಃ-</u>**

4. ಪ್ಲೇಸ್ ಅಫ್ ಸೇಫ್ಟಿ ಹೋಮ್ ನಲ್ಲಿ ಆರೋಪಿಗಳು ಹೊಡೆದು ಹಾಕಿರುತ್ತಾರೆಂದು ಹೇಳಲಾದ ಬಾಗಿಲಿನ ತುಂಡನ್ನು ಅಮಾನತ್ತು ಪಡಿಸಿಕೊಂಡಿಲ್ಲ. ನಾನು ನಿಪಿ17 ರಿಂದ 19 ರ ಭಾವಚಿತ್ರಗಳು ಹಾಲಿ ಪ್ರಕರಣಕ್ಕೆ ಸಂಬಂಧ ಇಲ್ಲದೇ ಇದ್ದರೂ ಸಹ ಪಡೆದುಕೊಂಡಿರುತ್ತೇನೆಂದರೆ ಸರಿಯಲ್ಲ. ಆರೋಪಿಗಳು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಅಂಕಿ ಅಂಶಗಳಿಗೋಸ್ಕರ ಹಾಲಿ ಪ್ರಕರಣದಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**(ವಿನೋದ್ ಕುಮಾರ್ ಎಂ )**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.